ಗುರು-ಶಿಷ್ಯರ ಸಂಬಂಧ ಉತ್ತಮವಾಗಿರಲಿ



ಬೆಂಗಳೂರು: ಈಗಿನ ಕಾಲದಲ್ಲಿ ಗುರು-ಶಿಷ್ಯರ ಸಂಬಂಧ ಉತ್ತಮ ವಾಗಿರ ಬೇಕು, ಅದರೊಂದಿಗೆ ವಿದ್ಯಾರ್ಥಿ ಗಳಿಗೆ ಪ್ರಶ್ನಿಸುವ ಗುಣವನ್ನು ಶಿಕ್ಷಕರು ಕಲಿಸಬೇಕು. ಇದರಿಂದ ಪ್ರಜಾಪ್ರಭುತ್ವ ಉಳಿಯುತ್ತದೆ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಸಾಹಿತಿ ಕುಂ.ವೀರಭದ್ರಪ್ಪ ಹೇಳಿದರು.

ಕುವೆಂಪು ಸಭಾಂಗಣದಲ್ಲಿ ಕೃಷಿ ವಿಶ್ವವಿದ್ಯಾನಿಲಯ ಶಿಕ್ಷಕರ ಸಂಘದ ವತಿಯಿಂದ ಆಯೋಜಿಸಿದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಕೃಷಿ ವಿವಿಯಲ್ಲಿ ಅಧ್ಯಯನ ಮಾಡುತ್ತಿರುವವರಲ್ಲಿ ಐಎಎಸ್, ಐಪಿಎಸ್ ಹಾಗೂ ರಾಜಕಾರಣಿಗಳ ಮಕ್ಕಳಿಲ್ಲ. ನೀವೆಲ್ಲ ಗ್ರಾಮೀಣ ಭಾಗದಿಂದ ಬಂದ ನೇಗಿಲ ಯೋಗಿಯ ಮಕ್ಕಳು, ಗ್ರಾಮೀಣ ಪ್ರದೇಶದಿಂದ ಮಾತ್ರ ದೇಶ ಅಭಿವೃದ್ಧಿ ಆಗಲು ಸಾಧ್ಯ. ಕೃಷಿ ವಿಜ್ಞಾನ ಅಭ್ಯಾಸ ಮಾಡುತ್ತಿರುವವರು ನೀವು ಉತ್ತಮ ಸಾಧನೆ ಮಾಡಬೇಕು. ರಾಜಕಾರಣಿಗಳು ಹಾಗೂ ಉನ್ನತ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಳ್ಳುವುದು ತುಂಬಾ ಕಡಿಮೆ. ಆದರೆ, ನಮ್ಮ ರೈತರು ಮಾತ್ರ ಹೆಚ್ಚು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅಂತಹ ಪರಿಸ್ಥಿಯನ್ನು ಕೃಷಿ ವಿದ್ಯಾರ್ಥಿಗಳಾದ ನೀವು ನಿಭಾಯಿಸಬೇಕು ಎಂದು ಸಲಹೆ ನೀಡಿದರು.

> **“ವರ್ಷ ಕೃಷಿ ಮೇಳದ ಜೊತೆಗೆ ಕೃಷಿ ಸಾಹಿತ್ಯ ಸಮ್ಮೇಳನ ಮಾಡಲು ಚಿಂತನೆ ಮಾಡುತ್ತಿದ್ದೇವೆ. ಇದರಿಂದ ಕೃಷಿಯಲ್ಲಿ ಅಧ್ಯಯನ ಮಾಡಿ ಸಾಹಿತ್ಯಕ್ಕೆ ಕೊಡುಗೆ ನೀಡಿದ ವ್ಯಕ್ತಿಗಳನ್ನು ಗುರುತಿಸಿ, ಪ್ರೋತ್ಸಾಹಿಸಬಹುದು.**
>
> **ಡಾ.ಎಸ್.ವಿ.ಸುರೇಶ್, ಕುಲಪತಿ, ಕೃಷಿ ವಿಶ್ವವಿದ್ಯಾನಿಲಯ**

ಕೃಷಿ ವಿವಿಯ ಕುಲಪತಿ ಡಾ.ಎಸ್.ವಿ.ಸುರೇಶ್ ಮಾತನಾಡಿ, ಸೌಲಭ್ಯವಿಲ್ಲದೆ ಅವಕಾಶ ವಂಚಿತರು ಶಿಕ್ಷಣ ಪಡೆಯುವ ಸ್ಥಾನಕ್ಕೆ ಏರಬೇಕು. ಎಲ್ಲಾ ಕಷ್ಟಗಳನ್ನು ಸಹಿಸಿಕೊಂಡು ಕಷ್ಟಪಟ್ಟು ಕೆಲಸ ಮಾಡುವವರೇ ಶಿಕ್ಷಕರು ಎಂದರು.

ಕಾರ್ಯಕ್ರಮದಲ್ಲಿ ಕೃಷಿ ವಿವಿ ಶಿಕ್ಷಕರ ಸಂಘದ ಅಧ್ಯಕ್ಷ ಡಾ.ಎ.ಪಿ ಮಲ್ಲಿಕಾರ್ಜುನ ಗೌಡ, ಪ್ರಧಾನ ಕಾರ್ಯದರ್ಶಿ ಡಾ.ಆರ್. ಮುತ್ತುರಾಜ್, ವ್ಯವಸ್ಥಾಪನಾ ಮಂಡಳಿಯ ಸದಸ್ಯರಾದ ಡಾ.ಟಿ.ಕೆ.ಪ್ರಭಾಕರ ಶೆಟ್ಟಿ, ಬಿ.ಎಸ್.ಉಲ್ಲಾಸ್, ಡಾ.ಎಂ.ಚಂದ್ರೇಗೌಡ, ಡಾ.ಬಸವೇಗೌಡ ಸೇರಿ ಮತ್ತಿತರರಿದ್ದರು.



ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಬುಧವಾರ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಹಿರಿಯ ಸಾಹಿತಿ ಕುಂ.ವೀರಭದ್ರಪ್ಪ ಉದ್ಘಾಟಿಸಿದರು. ವಿಶ್ವ ವಿದ್ಯಾಲಯದ ಕುಲಪತಿ ಡಾ। ಎಸ್.ವಿ.ಸುರೇಶ ಹಾಜರಿದ್ದರು.

ಬೆಂ.ವಿವಿಯಲ್ಲಿ ಶಿಕ್ಷಕರ ದಿನ

21-09-2023
Hosadiganta
Pg 10

ರೈತರಿಗೆ ಧೈರ್ಯ ತುಂಬಿ: ಕುಂವೀ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೃಷಿಯಲ್ಲಿ ತೊಡಗಿರುವ ರೈತರಿಗೆ ಆತ್ಮಸ್ಥೈರ್ಯ ತುಂಬುವಂತಹ ಗುರುತರ ಜವಾಬ್ದಾರಿ ಕೃಷಿ ವಿವಿಗಳ ಮೇಲಿದೆ ಎಂದು ಹಿರಿಯ ಸಾಹಿತಿ ಕುಂ.ವೀರಭದ್ರಪ್ಪ ಅಭಿಪ್ರಾಯಪಟ್ಟರು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಹೆಬ್ಬಾಳದ ಜಿಕೆವಿಕೆಯಲ್ಲಿ ಬುಧವಾರ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಸ್ತುತ ಪರಿಸ್ಥಿತಿಯಲ್ಲಿ ಕನ್ನಡ ಮಾಧ್ಯಮ ಶಾಲೆಗಳನ್ನು ಮುಚ್ಚುತ್ತಿರುವುದು ಕಳವಳಕಾರಿಯಾಗಿದೆ. ಗ್ರಾಮೀಣ ಪ್ರದೇಶದ ಕನ್ನಡ ಶಾಲೆಗಳನ್ನು ಅಭಿವೃದ್ಧಿ ಪಡಿಸಲು ಎಲ್ಲರೂ ಶ್ರಮಿಸಬೇಕು. ಶಿಕ್ಷಕ ದಿನಾಚರಣೆ ಯಂತಹ ಕಾರ್ಯಕ್ರಮಗಳು ಕನ್ನಡ ಶಾಲೆಗಳ ಪುನಶ್ಚೇತನಕ್ಕೆ ವೇದಿಕೆ ಕಲ್ಪಿಸಬೇಕು. ದೇಶ ನಿರ್ಮಾಣ ದಲ್ಲಿಶಿಕ್ಷಕರಪಾತ್ರಮಹತ್ವದ್ದಾಗಿದೆ.ವಿದ್ಯಾರ್ಥಿಗಳನ್ನು ಪುಸ್ತಕದ ಹುಳುಗಳನ್ನಾಗಿ ಮಾಡದೆ ಮೌಲ್ಯಗಳಿಗೆ ಒತ್ತು ನೀಡುವ ದೇಶದ ಉತ್ತಮ ಪ್ರಜೆಗಳನ್ನಾಗಿ ರೂಪಿಸುವುದು ಗುರುವಿನ ಆದ್ಯ ಕರ್ತವ್ಯವಾಗಬೇಕು ಎಂದು ತಿಳಿಸಿದರು.

21-09-2023
Kannadaprabha
Pg 02

ಬೆಳಗಾವಿ ಜಿಲ್ಲೆಯಲ್ಲಿ ರೈತರು, ಹೈನುಗಾರರಲ್ಲಿ ಭೀತಿ | ಜಾನುವಾರು ಸಂತೆ ನಿಷೇಧ

ಮತ್ತೆ ವಕ್ಕರಿಸಿದ ಚರ್ಮಗಂಟು

■ ಗುರುದತ್ತ ಭಟ್ ಬೆಳಗಾವಿ
gurudatta.bhat@timesgroup.com

ಜಾನುವಾರುಗಳ ಚರ್ಮಗಂಟು ರೋಗ ಜಿಲ್ಲೆಯಲ್ಲಿ ಮತ್ತೆ ಹೆಚ್ಚುತ್ತಿರುವುದು ಮಳೆ ಕೊರತೆಯಿಂದ ಸಂಕಷ್ಟದಲ್ಲಿರುವ ರೈತರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಇಳುವರಿ ಕಡಿಮೆಯಾಗಿರುವುದರ ಜತೆಗೆ ಹೈನುಗಾರಿಕೆಗೂ ಹಿನ್ನಡೆಯಾಗುವ ಆತಂಕ ಎದುರಾಗಿದೆ.

ಕಳೆದ ವರ್ಷ ಜಿಲ್ಲೆಯಲ್ಲಿ ಜಾನುವಾರುಗಳ ಚರ್ಮಗಂಟು ರೋಗ ತೀವ್ರವಾಗಿತ್ತು. 2,500ಕ್ಕೂ ಹೆಚ್ಚು ಜಾನುವಾರುಗಳಲ್ಲಿ ಈ ರೋಗ ಕಾಣಿಸಿಕೊಂಡಿತ್ತು, ನೂರಾರು ಜಾನುವಾರುಗಳು ಮೃತಪಟ್ಟಿದ್ದವು. ಆದರೆ, ಮೇ ತಿಂಗಳಿಂದ ರೋಗ ಇಳಿಮುಖವಾಗಿ ಜುಲೈ ವೇಳೆಗೆ ಬಹುತೇಕ ನಿಯಂತ್ರಣಕ್ಕೆ ಬಂದಿತ್ತು. ಈ ಬಾರಿ ಜೂನ್, ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಜಿಲ್ಲೆಯಾದ್ಯಂತ ಮಳೆ ಕೊರತೆ ಉಂಟಾಗಿದೆ. ಯಾವುದೇ ಕೃಷಿ ಮಾಡಲಾಗದ ಸ್ಥಿತಿ ನಿರ್ಮಾಣವಾಗಿದೆ. ಈ ನಡುವೆ ಸೆಪ್ಟೆಂಬರ್ ಮೊದಲ ವಾರದಿಂದ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಜಾನುವಾರುಗಳಲ್ಲಿ ಚರ್ಮ ಗಂಟು ರೋಗ ಮತ್ತೆ ಕಾಣಿಸಿಕೊಳ್ಳತೊಡಗಿದೆ. ಬೈಲಹೊಂಗಲ, ಗೋಕಾಕ, ಮೂಡಲಗಿ ಮತ್ತು ರಾಯಬಾಗ ತಾಲೂಕಿನ ಜಾನುವಾರುಗಳಲ್ಲಿ ಈ ರೋಗ ಕಾಣಿಸಿಕೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಜಾನುವಾರು ಸಂತೆ ನಿಷೇಧಿಸಲಾಗಿದೆ.

ಜಾನುವಾರುಗಳ ಚರ್ಮಗಂಟು ರೋಗಕ್ಕೆ ನಿಗದಿತ ಔಷಧವಿಲ್ಲ. ಕುರಿಗಳ ಹುಣ್ಣುರೋಗಕ್ಕೆ ನೀಡಲಾಗುವ ಗೋಟ್ ಫಾಕ್ಸ್ ಲಸಿಕೆಯನ್ನೇ ಮುಂಜಾಗೃತಾ ಕ್ರಮವಾಗಿ ಜಾನುವಾರುಗಳಿಗೂ ನೀಡಲಾಗುತ್ತಿದೆ. ಈ ಬಾರಿ ಮೇ ತಿಂಗಳಿಂದ ಜೂನ್ ಎರಡನೇ ವಾರದವರೆಗೆ ಪಶು ಸಂಗೋಪನಾ ಇಲಾಖೆಯ ಅಧಿಕಾರಿಗಳು ಜಿಲ್ಲೆಯ ಸುಮಾರು



ಚರ್ಮಗಂಟು ರೋಗ ತಗುಲಿದ ಹಸು.

5.90 ಲಕ್ಷ ಜಾನುವಾರುಗಳಿಗೆ ಲಸಿಕೆ ನೀಡಿದ್ದಾರೆ. ಅಲ್ಲದೇ ಸುಮಾರು 2 ಲಕ್ಷ ಲಸಿಕೆ ಸಂಗ್ರಹಿಸಿಟ್ಟುಕೊಳ್ಳಲಾಗಿದೆ. ಲಸಿಕೆ ನೀಡಿದ್ದರೂ ಚರ್ಮಗಂಟು ರೋಗ ಹರಡುತ್ತಿರುವ ಹಿನ್ನೆಲೆಯಲ್ಲಿ ಈ ಲಸಿಕೆ ಪರಿಣಾಮ ಬೀರದಿರುವ ಅನುಮಾನವನ್ನು ರೈತರು ವ್ಯಕ್ತಪಡಿಸಿದ್ದಾರೆ.

ತೀವ್ರತೆ ಕಡಿಮೆ ಇದೆ: ಸೆ.14ರಂದು ಬೆಂಗಳೂರಿನ ಪಶುರೋಗ ತನಿಖಾ ಸಂಸ್ಥೆಯ ವೈದ್ಯ ಡಾ. ಮಂಜುನಾಥ ರೆಡ್ಡಿ ಮತ್ತು ತಂಡ ಗೋಕಾಕ ತಾಲೂಕಿನ ರಾಜಾಪುರ, ಬಳೋಬಾಳ, ತುಕ್ಕಾನಟ್ಟಿ ಹಾಗೂ ಮೂಡಲಗಿ ಗ್ರಾಮಗಳಿಗೆ ಭೇಟಿ ನೀಡಿ ಜಾನುವಾರುಗಳಲ್ಲಿ ಕಾಣಿಸಿಕೊಂಡಿರುವ ಚರ್ಮಗಂಟು ರೋಗ ಪರೀಕ್ಷಿಸಿದೆ. ಪ್ರಸಕ್ತ ವರ್ಷ ಕಂಡುಬಂದಿರುವ ಚರ್ಮಗಂಟು ರೋಗ ಮೇಲ್ನೋಟಕ್ಕೆ ಸೌಮ್ಯ ಪ್ರಮಾಣದಲ್ಲಿದ್ದು, ರೋಗದ ತೀವ್ರತೆ ಕಳೆದ ವರ್ಷಕ್ಕಿಂತ ಕಡಿಮೆ ಇದೆ. ಆದರೂ ಹೆಚ್ಚಿನ ಪರೀಕ್ಷೆಗಾಗಿ ಜಾನುವಾರುಗಳ ರಕ್ತ, ಮೂಗಿನ ಸ್ರಾವ ಮತ್ತು ಚರ್ಮಗಂಟಿನ ಮಾದರಿಗಳನ್ನು ಸಂಗ್ರಹಿಸಲಾಗಿದ್ದು, ಬೆಂಗಳೂರಿನ ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿದೆ ಎಂದು ಜಿಲ್ಲಾ ಪಶು ಸಂಗೋಪನಾ ಇಲಾಖೆ ಅಧಿಕಾರಿ ತಿಳಿಸಿದ್ದಾರೆ.

ರೋಗ ಲಕ್ಷಣ

ಚರ್ಮಗಂಟು ರೋಗ ತಗುಲಿದ ಜಾನುವಾರುಗಳು ಅತಿಯಾದ ಜ್ವರದಿಂದ ಬಳಲುತ್ತವೆ. ಕಣ್ಣುಗಳಿಂದ ನೀರು ಸೋರುವುದು, ಕಾಲುಗಳಲ್ಲಿ ಬಾವು ಕಂಡುಬರುತ್ತದೆ. ಜಾನುವಾರುಗಳ ಚರ್ಮದ ಮೇಲೆ 2-5 ಸೆಂ.ಮೀನಷ್ಟು ಅಗಲವಿರುವ ಗುಳ್ಳೆ ಕಾಣಿಸಿಕೊಂಡು ನಂತರ ಒಡೆದು ಗಾಯವಾಗಿ ನೋವುಂಟಾಗುತ್ತದೆ, ಸೂಕ್ತ ಚಿಕಿತ್ಸೆ ನೀಡದಿದ್ದಲ್ಲಿ ನೊಣಗಳಿಂದ ಗಾಯ ವ್ರಣವಾಗಿ ಹುಳಬೀಳುವ ಹಂತಕ್ಕೆ ಮುಟ್ಟುವ ಅಪಾಯ ಇದೆ. ಚರ್ಮಗಂಟು ರೋಗದಿಂದ ಹಾಲಿನ ಇಳುವರಿ ಕಡಿಮೆಯಾಗುತ್ತದೆ. ಹಸು ತೀವ್ರವಾಗಿ ಬಳಲಿ ಸಾವಿಗೀಡಾಗಬಹುದು. ಮೊದಲು ಈ ರೋಗ ಜರ್ಸಿ, ಹೆಚ್.ಎಫ್. ಹಸುಗಳಲ್ಲಿ ಕಂಡುಬರುತ್ತಿತ್ತು. ಈ ಬಾರಿ ದೇಸಿ ತಳಿಯ ಹಸುಗಳಲ್ಲೂ ಕಂಡುಬರುತ್ತಿದೆ. ಚರ್ಮಗಂಟು ರೋಗ ಜಾನುವಾರುಗಳಲ್ಲಿ ಸಾಂಕ್ರಾಮಿಕವಾಗಿದೆ. ರೋಗ ತಗುಲಿದ ಜಾನುವಾರುಗಳನ್ನು ಕಚ್ಚಿದ ಸೊಳ್ಳೆ, ಉಣ್ಣೆ, ನೊಣ ಹಾಗೂ ವಿವಿಧ ಕೀಟಗಳು ಬೇರೆ ಜಾನುವಾರುಗಳನ್ನು ಕಚ್ಚಿದರೆ ಅವುಗಳಿಗೂ ರೋಗ ಹರಡುತ್ತದೆ. ಇದನ್ನು ತಡೆಯಬೇಕಿದ್ದರೆ ಜಾನುವಾರುಗಳ ಮೈಮೇಲೆ ಹಸಿ ಬಟ್ಟೆ ಹಾಕಬೇಕು. ತಂಪಾದ ಜಾಗದಲ್ಲಿ ಕಟ್ಟಬೇಕು. ರೋಗಗ್ರಸ್ಥ ಜಾನುವಾರುಗಳನ್ನು ಇತರ ಜಾನುವಾರುಗಳಿಂದ ಪ್ರತ್ಯೇಕವಾಗಿ ಇಡಬೇಕು.

ಜಿಲ್ಲೆಯ ಕೆಲ ತಾಲೂಕುಗಳಲ್ಲಿ ಜಾನುವಾರುಗಳ ಚರ್ಮಗಂಟು ರೋಗ ಪುನಃ ಕಾಣಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಜಾನುವಾರುಗಳ ರಕ್ತ, ಮೂಗಿನ ಸ್ರಾವದ ಮಾದರಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.

- ರಾಜೀವ ಕೂಲೇರ,
ಉಪ ನಿರ್ದೇಶಕ, ಪಶು ಸಂಗೋಪನಾ ಇಲಾಖೆ, ಬೆಳಗಾವಿ

21-09-2023
V-karanataka Pg 10

ಕೀನ್ಯಾದಿಂದ ಬೆಣ್ಣೆ ಹಣ್ಣು ಆಮದು

ನೈರೋಬಿ: ಭಾರತಕ್ಕೆ ಕೀನ್ಯಾ ದೇಶವು ಬೆಣ್ಣೆ ಹಣ್ಣು ರಫ್ತು ಪ್ರಾರಂಭಿಸಿದ್ದು, ಮೊದಲ ಸರಕು ಈಗಾಗಲೇ ಮುಂಬಯಿಗೆ ತಲುಪಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರಮಾಣದ ಬೆಣ್ಣೆಹಣ್ಣು ಭಾರತವನ್ನು ತಲುಪಲಿದೆ ಎಂದು ಕೀನ್ಯಾ ರಾಜತಾಂತ್ರಿಕ ಅಧಿಕಾರಿ ಐರೀನ್ ಓಲೂ ಹೇಳಿದ್ದಾರೆ.

ಸೂಕ್ಷ್ಮ ಹಾಗೂ ಕಡಿಮೆ ಬಾಳಿಕೆ ಅವಧಿಯ (ಶೆಲ್ಫ್ ಲೈಫ್) ಕೃಷಿ ಉತ್ಪನ್ನವಾಗಿರುವ ಬೆಣ್ಣೆ ಹಣ್ಣಿನ ರಫ್ತಿಗೆ ಅನುಮತಿ ದೊರೆತಿದ್ದು ಇದೇ ಮೊದಲು. ಕೀನ್ಯಾ ದೇಶವು ಭಾರತಕ್ಕೆ ಟೀ ಮತ್ತು ಕಾಫಿಯನ್ನು ರಫ್ತು ಮಾಡುತ್ತಿದ್ದು ಇವೆರಡೂ ಉತ್ಪನ್ನಗಳ ಬಾಳಿಕೆ ಅವಧಿ (ಶೆಲ್ಫ್ ಲೈಫ್) ಬೆಣ್ಣೆ ಹಣ್ಣಿಗಿಂತ ಹೆಚ್ಚಿನದ್ದಾಗಿದೆ.

''ಭಾರತದ ಎಲ್ಲ ಕಠಿಣ ಮಾನದಂಡಗಳನ್ನು ಈಡೇರಿಸಬೇಕಾಗಿ ಬಂದಿದ್ದರಿಂದ ರಫ್ತಿಗೆ ಅನುಮತಿ ದೊರೆಯಲು ವಿಳಂಬವಾಗಿದೆ. ಮುಂದಿನ ದಿನಗಳಲ್ಲಿ ಕೀನ್ಯಾದ ಹಲವು ಬಗೆಯ ಹಣ್ಣುಗಳು, ತರಕಾರಿಗಳು ಮತ್ತು ಹೂವುಗಳ ರಫ್ತಿಗೆ ಇದರಿಂದ ಅನುಕೂಲವಾಗಲಿರುವ ವಿಶ್ವಾಸ ನಮಗಿದೆ,'' ಎಂದು ಐರೀನ್ ಓಲೂ ಹೇಳಿದ್ದಾರೆ.



■ 2022ರಲ್ಲಿ ಭಾರತವು 14.62 ಸಾವಿರ ಕೋಟಿ ರೂ. ಮೌಲ್ಯದ ಸರಕನ್ನು ಕೀನ್ಯಾಗೆ ರಫ್ತು ಮಾಡಿದೆ.

■ ಕೀನ್ಯಾದಿಂದ ಭಾರತ ಆಮದು ಮಾಡಿಕೊಂಡ ಸರಕಿನ ಮೌಲ್ಯ 558 ಕೋಟಿ ರೂ.

ಕೀನ್ಯಾ ಜಗತ್ತಿನ 6ನೇ ಅತಿದೊಡ್ಡ ಬೆಣ್ಣೆಹಣ್ಣು ಬೆಳೆಯುವ ದೇಶವಾಗಿದೆ. ಇದರಲ್ಲಿ ಶೇ.23ರಷ್ಟನ್ನು ನೆದರ್‌ಲೆಂಡ್ಸ್, ಅಮೆರಿಕ, ಚೀನಾ, ಸ್ವೀನ್ ಸೇರಿದಂತೆ ಹಲ ರಾಷ್ಟ್ರಗಳಿಗೆ ರಫ್ತು ಮಾಡುತ್ತಿದೆ.

21-09-2023
V-karanataka Pg 04

For more information visit
University Library Website
Web - uasbagrilibindia.org
E-mail- librarian@uasbangalore.edu.in